ಇನ್ನೊಂದು ಯೋಜನೆಯ ಅಂದಾಜನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಇದು ೨೦೦೧ನೇ ಇಸವಿಯಲ್ಲಿ ಆಗಿನ ಜನಸಂಖ್ಯೆಗೆ ಬೇಕಾದ ನೀರಿನ ಪ್ರಮಾಣ. ಆಗ ಇವರ ಪ್ರಕಾರ ಸುಮಾರು ೧೫ ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ಮಾಡಬೇಕಾಗುತ್ತದೆ. ಇದಕ್ಕೆಲ್ಲಾ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ ಮೇಲೆ ಪರಿಶೀಲಿಸುತ್ತೇವೆ.

ಶ್ರೀ ಪಟಪಾಕ್ಕಿ ರತ್ನಾಕರ್.—ಸ್ವಾಮಿ, ೧೯೧೧ರ ಜನಗಣತಿಯ ಪ್ರಕಾರ ೧೨,೧೭೫ ಜನಸಂಖ್ಯೆ ತೀರ್ಥಹಳ್ಳಿಯಲ್ಲಿದೆ ಎಂದು ತಿಳಿಸಿದಿರಿ. ಇಲ್ಲಿ ಫ್ಲೋಟಿಂಗ್ ಪಾಪ್ಯುಲೇಷನ್ ಇದೆ. ಚಕ್ರ ವರಾಹಿ ಈ ಭಾಗದಲ್ಲಿ ಅಧಿಕಾರಿಗಳು ವಾಸಮಾಡುತ್ತಿದ್ದಾರೆ. ಇವರೆಲ್ಲಾ ನಮ್ಮ ತೀರ್ಥಹಳ್ಳಿ ನೀರಿನ ವ್ಯವಸ್ಥೆಗೆ ಹೊಂದಿಕೊಳ್ಳಬೇಕಾಗಿದೆ. ಈಗಿನ ಜನಸಂಖ್ಯೆ ಸುಮಾರು ೧೫ ಸಾವಿರ ಇದೆ. ಇದರ ಜೊತೆಗೆ ಫ್ಲೋಟಿಂಗ್ ಪಾಪ್ಯುಲೇಷನ್ನೂ ಸೇರಿದರೆ ಸುಮಾರು ೧೮ ಸಾವಿರ ಜನಸಂಖ್ಯೆ ಆಗುತ್ತದೆ. ಆದ್ದರಿಂದ, ತೀರ್ಥಹಳ್ಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲು ಸರ್ಕಾರ ಸೂಕ್ತ ಗಮನ ಹರಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಬಂದ ಕೂಡಲೇ ಅದನ್ನು ಪರಿಶೀಲಿಸುತ್ತೇವೆ.

ಚುಕ್ಕಿ ಗುರುತಿನ ಪ್ರಶ್ನೆ ೪೫೭ (ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಕರ್ನಾಟಕದಲ್ಲಿ ಪಾರ್ಸಲ್ ಸಾಗಾಣಿಕೆಗೆ ಏಕರೀತಿಯ ನಿಯಮಾವಳಿಗಳನ್ನು ರಚಿಸುವ ಬಗ್ಗೆ

೨೪೨ (೭೬೬) ಶ್ರೀ ಸಿ.ಎಂ. ಉದಾಸಿ (ಹಾನಗಲ್ಲ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೇ:—

ಅ) ಉತ್ತರ ಕರ್ನಾಟಕದಲ್ಲಿ ಬಸ್ಸುಗಳಲ್ಲಿ ಪಾರ್ಸಲ್ ಸಾಗಾಣಿಕೆಯು ಅನುಕೂಲವಿದ್ದು ಹಳೇ ಮೈಸೂರು ಭಾಗದಲ್ಲಿ ಈ ಸೌಲಭ್ಯವಿಲ್ಲದಿರುವುದಕ್ಕೆ ಕಾರಣವೇನು?

ಆ) ಇಡೀ ಕರ್ನಾಟಕದಲ್ಲಿ ಪಾರ್ಸಲ್ ಸಾಗಾಣಿಕೆಗೆ ಏಕ ರೀತಿಯ ನಿಯಮಾವಳಿಗಳನ್ನು ರಚಿಸಲಾಗುವುದೇ?

ಇ) ಮೆಟಡೋರ್ ಹಾಗೂ ಸ್ಟ್ಯಾಂಡರ್ಡ್-೨೦ ಮಿನಿ ಬಸ್ಸುಗಳಲ್ಲಿ ೧೫ ಮಂದಿ (ಪಬ್ಲಿಕ್ ಕ್ಯಾರಿಯರ್) ಪ್ರಯಾಣಿಗರಿಗೆ ಪ್ರಯಾಣ ಮಾಡಲು ಪರವಾನಿಗೆ ನೀಡಲಾಗುವುದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

ಅ) ಪಾರ್ಸಲ್ ಸಾಗಾಣಿಕೆಯು ಸೌಲಭ್ಯವು ಉತ್ತರ ಕರ್ನಾಟಕ ಭಾಗವು ಕರ್ನಾಟಕಕ್ಕೆ ಸೇರುವ ಮೊದಲಿನಿಂದಲೂ ಅಲ್ಲಿ ಜಾರಿಯಲ್ಲಿತ್ತು. ಈಗಲೂ ಸಹ ಈ ಕ್ರಮ ಅಲ್ಲಿ ಜಾರಿಯಲ್ಲಿದೆ. ಹಳೇ ಮೈಸೂರು ಪ್ರಾಂತ್ಯದ ಪುರಸಭೆಗಳು ಆಕ್ಟ್ರಾಯಿ ವಸೂಲಿ ಪದ್ಧತಿಯಲ್ಲಿ ವಿವಿಧ ನೀತಿಯನ್ನು ಅನುಸರಿಸುತ್ತಿದ್ದರಿಂದಲೂ ಆಲ್ಲದೆ, ಸ್ಥಳಾವಕಾಶ ಮತ್ತು ನುರಿತ ಸಿಬ್ಬಂದಿಯ ಕೊರತೆ ಇದ್ದಿದ್ದರಿಂದ ಈ ಸೌಲಭ್ಯವನ್ನು ಹಳೇ ಮೈಸೂರು ಭಾಗದಲ್ಲಿ ಬೇಗ ಜಾರಿಗೆ ತರುವುದಕ್ಕಾಗಲಿಲ್ಲ.

ಆ) ರಚಿಸಲಾಗುವುದು.

ಇ) ಇಲ್ಲ.

ಶ್ರೀ ಸಿ.ಎಂ. ಉದಾಸಿ.—ಮಾನ್ಯ ಅಧ್ಯಕ್ಷರೆ, ಮೆಟಡೋರ್ ಹಾಗೂ ಸ್ಟ್ಯಾಂಡರ್ಡ್-೨೦ ಮಿನಿಬಸ್‌ಗಳಲ್ಲಿ ೧೫-೨೦ ಮಂದಿ ಪ್ರಯಾಣಿಕರನ್ನು ಕೂಡಿಸಿಕೊಂಡು ಹೋಗಲು ಅನುಮತಿ ನೀಡಬೇಕು. ಕಾರಣ ನಮ್ಮಲ್ಲಿ ಪ್ರಯಾಣಿಕರ ಸಂಖ್ಯೆ ಬಹಳ ಇದೆ. ಅಲ್ಲದೆ ಮೆಟಡೋರ್‌ನಲ್ಲಿ ಪ್ರಯಾಣಿಕರನ್ನು ಕರೆದುಕೊಂಡು ಹೋಗುವಾಗ ಪೋಲೀಸರು ಕಿರುಕುಳ ಕೊಡುತ್ತಿದ್ದಾರೆ. ಆದ್ದರಿಂದ ಈ ಪೋಲೀಸರ ಕಿರುಕುಳವನ್ನು ತಪ್ಪಿಸುವ ಸಲುವಾಗಿ ಮೆಟಡೋರ್ ವ್ಯಾನ್ ಹಾಗೂ ಸ್ಟ್ಯಾಂಡರ್ಡ್-೨೦ ಮಿನಿ ಬಸ್‌ಗಳಲ್ಲಿ ೧೫-೨೦ ಜನ ಪ್ರಯಾಣಿಕರನ್ನು ಕೊಂಡೊಯ್ಯಲು ಪರವಾನಿಗೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮೆಟಡೋರ್ ವ್ಯಾನಿನ ಬಗ್ಗೆ ಅನೇಕ ಸಾರಿ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಯಾವುದೇ ಕಾರಣಕ್ಕೂ ಇದರಲ್ಲಿ ೧೫–೨೦ ಜನ ಪ್ರಯಾಣಿಕರನ್ನು ಕೂಡಿಸಿಕೊಂಡು ಹೋಗುವುದಕ್ಕೆ ಅವಕಾಶ ಇಲ್ಲ. ಇನ್ನು ಪೋಲೀಸರಿಂದ ಕಿರುಕುಳ ಇದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದರಲ್ಲಿ ಸತ್ಯಾಂಶ ಇದೆಯೆಂದು ನನಗನಿಸುವುದಿಲ್ಲ. ಮೆಟಡೋರ್ ವಾಲೀಕರು ೩೦–೪೦ ಜನ ಪ್ರಯಾಣಿಕರನ್ನು ತುಂಬಿಕೊಂಡು ಹೋಗುವಾಗ ಇಕ್ಕಟ್ಟಿಗೆ ಸಿಕ್ಕಿಕೊಳ್ಳುವಂತೆ ಮಾಡಿ, ಅವರೇ ಪ್ರಯಾಣಿಕರಿಗೆ ಒಂದು ರೀತಿಯಲ್ಲಿ ಕಿರುಕುಳವನ್ನು ಕೊಡುತ್ತಿದ್ದಾರೆ. ಆದ್ದರಿಂದ ಈ ಮಿನಿ ಬಸ್ಸುಗಳಿಗೆ ಹೆಚ್ಚಿನ ಟ್ಯಾಕ್ಸ್‌ನು ಹಾಕಿದ್ದೇವೆ. ಈಗ ೬+೧ ಪ್ರಯಾಣಿಕರನ್ನು ಕೂಡಿಸಿಕೊಂಡು ಹೋಗಲು ಪರವಾನಗಿಯನ್ನು ತೆಗೆದುಕೊಂಡಿದ್ದಾರೆ ಆದರೆ ಕೆಲವು ಸಂದರ್ಭದಲ್ಲಿ ಇದು ಅನ್‌ಎಕನಾಮಿಕಲ್ ಆಗುತ್ತದೆಂದು, ನನಗೂ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೂ ಅವರು ಮನವಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಮೋಟಾರ್ ವೆಹಿಕಲ್ಸ್ ಆಕ್ಟ್‌ನಲ್ಲಿ ಒಂದು ಲೋಕಲ್ ಅಮೆಂಡ್‌ಮೆಂಟ್ ತರಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ. ಬಹುಶಃ ಇದು ಇನ್ನು ಒಂದೆರಡು ತಿಂಗಳಲ್ಲಿ ಆಗಬಹುದು. ಅದು ಆದಮೇಲೆ ಇನ್ನೂ ೨–೩ ಜನ ಪ್ರಯಾಣಿಕರು ಅದರಲ್ಲಿ ಹೋಗಲು ಅವಕಾಶ ಮಾಡಿಕೊಡುತ್ತೇವೆ. ಇದನ್ನೆಲ್ಲ ಏತಕ್ಕೆ ಮಾಡುತ್ತಿದ್ದೇವೆಂದರೆ ಈ ಮೆಟಡೋರ್ ವ್ಯಾನ್‌ಗಳಲ್ಲಿ ೪೦–೫೦ ಜನಕ್ಕೂ ಮೇಲ್ಪಟ್ಟು ಕೊಂಡೊಯ್ಯುತ್ತಿರುತ್ತಾರೆ. ಇವರು ಹೇಗೆ ಹೋಗುತ್ತಾರೆಂದರೆ ಇವರು ಹೋದ ಕಡೆಯೇ ರೋಡ್ ಆಗಿರುತ್ತದೆ. ಆದ್ದರಿಂದ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಿ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಒಂದು ಕಾನೂನನ್ನು ಮಾಡಲಾಗಿದೆ.

ಶ್ರೀ ಪಿ.ಎಂ. ಉದಾಸಿ.—ಬಿಜಾಪುರದಿಂದ ಯಾವುದೇ ಪಾರ್ಸಲನ್ನು ಬೆಂಗಳೂರಿಗೆ ಕಳುಹಿಸ ಬೇಕಾದರೆ ಮೊದಲು ಬಹಳ ಸುಲಭವಾಗಿ ಕಳುಹಿಸಲು ಸಾಧ್ಯವಿತ್ತು. ಈಗ ಪಾರ್ಸಲ್ ಕಳುಹಿಸ ಬೇಕಾದರೆ ಹಾನ್‌ಗಲ್, ಹುಬ್ಬಳ್ಳಿ ಮುಖಾಂತರವಾಗಿ ಬೆಂಗಳೂರಿಗೆ ಕಳುಹಿಸಬೇಕಾಗಿರುತ್ತದೆ. ಇದರಿಂದ ಬಹಳ ತೊಂದರೆ ಇರುತ್ತದೆ. ಪುರಸಭೆಗಳಿಗೂ ಕೆ.ಎಸ್.ಆರ್.ಟಿ.ಸಿ.ಗೂ ಸಂಬಂಧ ಯಾವ ರೀತಿ ಕಲ್ಪಿಸಲಾಗುತ್ತದೆಯೋ ಗೊತ್ತಾಗುತ್ತಿಲ್ಲ. ಇದನ್ನು ಪರಿಶೀಲನೆ ಮಾಡಬೇಕು. ಈ ಸಾಕಾಣಿಕೆಯ ವಿಚಾರದಲ್ಲಿ ಬೆಂಗಳೂರಿಗೆ, ಮತ್ತು ಉಳಿದ ಸ್ಥಳಗಳಿಗೆ ಹೋಗುವುದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಸದಸ್ಯರು ಪಾರ್ಸಲ್ ವಿಚಾರವನ್ನು ಎತ್ತಿ ನನಗೂ ಸ್ವಲ್ಪ ಸಹಾಯ ಮಾಡಿದ್ದಾರೆ. ಈ ಪಾರ್ಸಲ್ ವ್ಯವಸ್ಥೆಯಿಂದ ಕೆ.ಎಸ್.ಆರ್.ಟಿ.ಸಿ.ಗೆ ಲಾಭವಾಗುತ್ತದೆಯೇ, ಸಾರ್ವಜನಿಕರಿಗೆ ಉಪಯೋಗವಾಗುತ್ತದೆಯೇ ಇದನ್ನೆಲ್ಲ ತಿಳಿದುಕೊಂಡು ಬೆಳಗಾಂ ವಿಭಾಗದಲ್ಲಿ ವರ್ಷಕ್ಕೆ ೧೦–೧೨ ಸಾವಿರ ರೂಪಾಯಿಗಳು ಲಾಭವಾಗುವುದಿದ್ದರೆ ವ್ಯವಸ್ಥೆ ಮಾಡುತ್ತೇನೆ. ಮತ್ತೆ ಅಲ್ಲಿಂದ ರಾಜ್ಯದ ಎಲ್ಲ ಭಾಗಗಳಿಗೂ ವಿಸ್ತರಣೆ ಮಾಡಿದರೆ ಅನುಕೂಲವಾಗುತ್ತದೆಯೇ ಎನ್ನುವ ಬಗ್ಗೆಯೂ ಕೂಡ ವಿಚಾರ ಮಾಡುತ್ತೇನೆ. ಕೆ.ಎಸ್.ಆರ್.ಟಿ.ಸಿ. ಮುಖಾಂತರ ಮಾಡಬೇಕೆಂದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಹತ್ತು ಹದಿನೈದು ದಿವಸಗಳಲ್ಲೇ ಮಾಡ ಬೇಕೆಂದರೆ ಸ್ವಲ್ಪ ಕಷ್ಟವಾಗುತ್ತದೆ. ಏತಕ್ಕೆಂದರೆ ಫೆಸಿಲಿಟೀಸ್ ಬೇಕಾಗುತ್ತದೆ, ಗೋಡೌನ್ ಬೇಕಾಗುತ್ತದೆ, ಮತ್ತು ಸಿಬ್ಬಂದಿ ಬೇಕಾಗುತ್ತದೆ, ಇದನ್ನೆಲ್ಲಾ ನೋಡಿಕೊಂಡು ನಿಧಾನವಾಗಿಯಾದರೂ ಪರಿಶೀಲಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು.—ಚುಕ್ಕೆ ಪ್ರಶ್ನೆ ೨೪೮ (೬೦೭) ಮತ್ತು ಚುಕ್ಕೆ ಪ್ರಶ್ನೆ ೨೪೯ (೪೭೯) ಈ ಪ್ರಶ್ನೆಗಳಿಗೆ ಉತ್ತರಿಸಲು ಈಗ ಮಾನ್ಯ ಕೈಗಾರಿಕಾ ಸಚಿವರು ಇಲ್ಲದ ಕಾರಣ ಅನಂತರ ತೆಗೆದುಕೊಳ್ಳಲಾಗುವುದು.

ಭಾಗ್ಯಮಂದಿರ ಯೋಜನೆಯನ್ನು ಪುರಸಭೆಯ ಜನಸಂಖ್ಯೆಗನುಗುಣವಾಗಿ ಕಲ್ಪಿಸುವ ಬಗ್ಗೆ

೨೫೦ (೭೮೩) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಭಾಗ್ಯಮಂದಿರ ಯೋಜನೆಯು ಪುರಸಭೆಯ ಜನಸಂಖ್ಯೆಗನುಗುಣವಾಗಿ ಅವಕಾಶ ಕಲ್ಪಿಸಿ ಕೊಡಲಾಗಿದೆಯೆ ?